S C.R.P.67

Form No.4
(Criminal)
Deposition
Sheets
(R.P.No.57)

**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**

**ನ್ಯಾಯಾಲಯ, ಮಂಡ್ಯ**

**ಸ್ಪೆಷಲ್ ಕೇಸ್ ನಂಬರ್ಃ 387/2018**

**ಚಾ.ಸಾ.–01 ಪ್ರಾ.ಸಾ.–01**

| | |
|---|---|
| **ಸಾಕ್ಷಿದಾರರ ಹೆಸರು** | **ಕಾಕವ್ವ** |
| **ತಂದೆಯ ಹೆಸರು** | **ಕರಿಯಪ್ಪ ಮಾದರ** |
| **ವಯಸ್ಸು** | **30 ವರ್ಷಗಳು** |
| **ಉದ್ಯೋಗ** | **ಕೂಲಿಕೆಲಸ** |
| **ವಾಸ** | **ಒಬಳಾಪುರ ಗ್ರಾಮ, ಬೆಳಗಾವಿ ಜಿಲ್ಲೆ** |

**ದಿನಾಂಕಃ 30.06.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ನನ್ನ ಗಂಡ ಈಗ ತೀರಿಕೊಂಡಿದ್ದಾರೆ. ನಾವು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದೇವೆ.

2) ಚಾಸಾ 2 ಪರಿಚಯ ಇದ್ದಾರೆ. ಚಾಸಾ 3 ರಿಂದ 12 ಪರಿಚಯ ಇಲ್ಲ. 1 ನೆ ಆರೋಪಿಯ ಪರಿಚಯ ಇದೆ. 2 ನೆ ಆರೋಪಿಯ ಪರಿಚಯ ಇಲ್ಲ. ಆರೋಪಿ 1 ಒಬಳಾಪುರ ತಾಂಡ ರಾಮದುರ್ಗ ತಾಲೂಕಿನವರು. 1 ನೆ ಆರೋಪಿ ಲಂಬಾಣಿ ಜಾತಿಯವರು. 2 ನೆ ಆರೋಪಿ ಯಾವ ಊರಿನವರು ಯಾವ ಜಾತಿಯವರು ಗೊತ್ತಿಲ್ಲ. ನನ್ನ ಗಂಡ ಸುಮಾರು 8–9 ವರ್ಷದ ಹಿಂದೆ ಅಂಗರಹಳ್ಳಿ ಗ್ರಾಮದಲ್ಲಿದ್ದ ಕ್ರಶರ್ ನಲ್ಲಿ ಕೆಲಸ ಮಾಡುತ್ತಿದ್ದರು. ಸದರಿ ಅಂಗರಹಳ್ಳಿ ಶ್ರೀರಂಗಪಟ್ಟಣ ತಾಲೂಕಿನಲ್ಲಿದೆ. ಆ ಜಾಗದಲ್ಲಿ 7–8 ಕುಟುಂಬಗಳು ಕೆಲಸ ಮಾಡುತ್ತಿದ್ದವು. ಕ್ರಶರ್ ಹೆಸರು ನನಗೆ ಗೊತ್ತಿಲ್ಲ. ಅದರ ಮಾಲೀಕರು ಗೊತ್ತಿಲ್ಲ. ನನ್ನ ಗಂಡ ಕೆಲಸ ಮಾಡುತ್ತಿದ್ದ ಕ್ರಶರ್ ನಲ್ಲಿ 1 ನೆ ಆರೋಪಿ ಕೂಡ ಕೆಲಸ ಮಾಡುತ್ತಿದ್ದರು. ಹಾಗಾಗಿ ಅವರ ಪರಿಚಯ

ಇದೆ. ನನ್ನ ಗಂಡನನ್ನು ಕೆಲಸಕ್ಕೆ ಯಾರು ಸೇರಿಸಿದ್ದರು ಯಾರು ಕರೆದುಕೊಂಡು ಬಂದಿದ್ದರು ಗೊತ್ತಿಲ್ಲ. ಕ್ರಶರನ ಬಳಿ ಮನೆಯಲ್ಲಿ ನಾವು ವಾಸ ಮಾಡುತ್ತಿದ್ದೆವು. ನನ್ನ ಗಂಡ ಕುಡಿದು ಹೊಟ್ಟೆ ನೋವು ಎಂದು ಹೇಳುತ್ತಿದ್ದರು. ಈ ಬಗ್ಗೆ ಅವರಿಗೆ ಚಿಕಿತ್ಸೆ ಕೊಡಿಸಿದ್ದೆವು. ಆದರು ಕೂಡ ಅವರು ನನಗೆಹೊಟ್ಟೆ ನೋವು ಕಡಿಮೆ ಆಗುವುದಿಲ್ಲ ನಾನು ಸಾಯುತ್ತೇನೆ ಎಂದು ಹೇಳುತ್ತಿದ್ದರು. ಅಲ್ಲಿ ನಮ್ಮನ್ನು ಒತ್ತಾಯಪೂರಕವಾಗಿ ಕೆಲಸ ಮಾಡಿಸುತ್ತಿರಲಿಲ್ಲ , ನಮಗೆ ಅಡ್ವಾನ್ಸ್ ಕೊಟ್ಟು ಹೊರಗೆ ಹೋಗದಂತೆ ಒತ್ತಾಯ ಮಾಡುತ್ತಿರಲಿಲ್ಲ. ನನ್ನ ಗಂಡ ಸುಮಾರು 8 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ಗಂಡ ಕೊರೆಯ ಬಳಿ ಇದ್ದ ಮನೆಯಲ್ಲಿ ನೇಣು ಹಾಕಿಕೊಂಡಿರುತ್ತಾರೆ. ಈ ವಿಚಾರವನ್ನು ರಸ್ತೆಯಲ್ಲಿ ಓಡಾಡುತ್ತಿರುವವರು ಬಂದು ನನಗೆ ಹೇಳಿರುತ್ತಾರೆ. ನಂತರ ಮೈದುನ , ನಾನು ಸ್ಥಳಕ್ಕೆ ಹೋಗಿದ್ದೇವೆ. ನಾವು ಹೋಗಿ ನೋಡಿದಾಗ ವೈರಿನ ಹಗ್ಗದಲ್ಲಿ ಅವರು ನೇಣುಬಿಗಿದುಕೊಂಡ ಸ್ಥಿತಿಯಲ್ಲಿ ಕಂಡುಬಂದಿರುತ್ತಾರೆ. ನಂತರ ಅವರನ್ನು ಕೆಳಗೆ ಇಳಿಸಿ ನೀರು ಕುಡಿಸಿದ್ದೇವೆ ಹಾಗೂ ಶ್ರೀರಂಗಪಟ್ಟಣ ಆಸ್ಪತ್ರೆಗೆಸೇರಿದ್ದೇವೆ. ವೈದ್ಯರು ನನ್ನ ಗಂಡ ತೀರಿಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ , ನಂತರನನ್ನನ್ನು ಮಂಡ್ಯ ಜಿಲ್ಲಾಸ್ಪತ್ರೆಗೆ ಕಳಿಸಿಕೊಟ್ಟಿದ್ದಾರೆ. ನನ್ನ ಗಂಡನ ಸಾವಿನ ಬಗ್ಗೆ ಯಾರ ಮೇಲು ಅನುಮಾನ ಇರುವುದಿಲ್ಲ. ನನ್ನ ಗಂಡನಿಗೆ ಹೆಚ್ಚಾಗಿ ಹೊಟ್ಟೆ ನೋವು ಇದ್ದುದರಿಂದ ಮದ್ಯಪಾನ ಮಾಡುತ್ತಿದ್ದರಿಂದ ಹೊಟ್ಟೆನೋವು ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ನಾನು ಯಾರ ಮೇಲು ಅನುಮಾನ ಪಟ್ಟು ದೂರು ಕೊಟ್ಟಿರುವುದಿಲ್ಲ. ನಾನು ಹೆಬ್ಬೆಟ್ಟು ಹಾಕುತ್ತೇನೆ, ಸಹಿ ಮಾಡುವುದಿಲ್ಲ. ನಾನು ನನ್ನ ಹೆಬ್ಬೆಟ್ಟನ್ನು ಮಂಡ್ಯದ ಆಸ್ಪತ್ರೆಯಲ್ಲಿ ಹಾಕಿದ್ದೇನೆ. ಪೊಲೀಸರು ಸದರಿ ಸಹಿ ಹಾಕಿಸಿಕೊಂಡಿರುತ್ತಾರೆ. ಸದರಿ ದಾಖಲೆ ಈಗ ನೋಡುತ್ತಿದ್ದೇನೆ. ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ನಿಪಿ1 ರಲ್ಲಿ ಏನು ಬರೆದಿದೆ ಗೊತ್ತಿಲ್ಲ. ಪೊಲಿಸರು ನನ್ನ ಗಂಡ ತೀರಿಕೊಂಡ ಜಾಗದಲ್ಲಿ ಮತ್ತು ನಾವು ವಾಸ ಇದ್ದ ಮನೆ ಬಳಿ ಸಹಿಗಳನ್ನು ಪಡೆದುಕೊಂಡಿದ್ದಾರೆ. ಈಗ ನನಗೆ ತೋರಿಸುತ್ತಿರುವ 4 ಭಾವಚಿತ್ರಗಳಲ್ಲಿ ನಾನು ಕಂಡುಬರುತ್ತೇನೆ ಅವುಗಳನ್ನು ಒಟ್ಟಾರೆ ನಿಪಿ 2 ಎಂದು ಗುರುತಿಸಲಾಯಿತು. ಅವುಗಳನ್ನು ನನ್ನ ಗಂಡ ನೇಣುಬಿಗಿದುಕೊಂಡ ಜಾಗದಲ್ಲಿ ತೆಗೆಯಲಾಗಿದೆ. ಭಾವಚಿತ್ರಗಳನ್ನು ಯಾವ ಉದ್ದೇಶಕ್ಕೆ ತೆಗೆದುಕೊಂಡರು ಗೊತ್ತಿಲ್ಲ. ನನ್ನಗಂಡ

ನೇಣುಹಾಕಿಕೊಂಡಜಾಗದಲ್ಲಿ ನನ್ನ ಹೆಬ್ಬೆಟ್ಟು ತೆಗೆದುಕೊಂಡಿದ್ದಾರೆ. ಸದರಿ ದಾಖಲೆಯನ್ನು ನಿಪಿ 3 ಎಂದು ಗುರುತಿಸಲಾಯಿತು. ನಮ್ಮ ಮನೆ ಬಳಿ ಕೂಡ ನಾನು ಹೆಬ್ಬೆಟ್ಟು ಹಾಕಿದ್ದೇನೆ. ಆರೋಪಿಗಳುಕಿರುಕುಳ ಕೊಡುತ್ತಿದ್ದ ಕಾರಣ ನನ್ನ ಗಂಡ ತೀರಿಕೊಂಡಿದ್ದಾನೆ ಎಂದು ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ. ನನ್ನ ಗಂಡ ಸತ್ತ ಸಮಯದಲ್ಲಿ ಧರಿಸಿಕೊಂಡ ಬಟ್ಟೆಗಳನ್ನು ನೋಡಿದರೆ ಗುರುತಿಸಬಲ್ಲೆ. ಅವುಗಳನ್ನು ಬಿಳಿ ಬಟ್ಟೆಯಲ್ಲಿ ಸೀಲು ಮಾಡಲಾಗಿರುತ್ತದೆ. ಸದರಿ ಸೀಲುಗಳನ್ನು ತೆರೆದ ನ್ಯಾಯಾಲಯದಲ್ಲಿ ಹೊಡೆಯಲಾಗಿರುತ್ತದೆ. ಒಂದು ಚೀಲದಲ್ಲಿ ಪ್ಯಾಂಟು ಕಂಡುಬಂದಿರುತ್ತದೆ ಅದನ್ನು ಮುಮಾ 1 ಎಂದು ಗುರುತಿಸಲಾಗಿರುತ್ತದೆ. ಮತ್ತೊಂದು ಚೀಲದಲ್ಲಿ ಶರ್ಟು ಕಂಡುಬಂದಿರುತ್ತದೆ ಅದನ್ನು ಮುಮಾ 2 ಎಂದು ಗುರುತಿಸಲಾಗಿರುತ್ತದೆ. 3 ನೆ ಚೀಲದಲ್ಲಿ ಅವರ ನಿಕ್ಕರ್ ಕಂಡುಬಂದಿರುತ್ತದೆ , ಸಾಕ್ಷಿ ಗುರುತಿಸಿದ್ದರಿಂದ ಅದನ್ನು ಮುಮಾ 3 ಎಂದು ಗುರುತಿಸಲಾಗಿರುತ್ತದೆ. ನನ್ನ ಗಂಡ ಸಾವಿನ ಸಮಯದಲ್ಲಿ ಕೈಗೆ ದಾರಕಟ್ಟಿಕೊಂಡಿದ್ದರು ಸದರಿ ದಾರವನ್ನು ಕೂಡ ಈಗ ನಾನು 4 ನೆ ಚೀಲವನ್ನು ನೋಡುತ್ತಿದ್ದೇನೆ ಅದನ್ನು ಮುಮಾ 4 ಎಂದು ಗುರುತಿಸಲಾಯಿತು. ನನ್ನ ಗಂಡ ನೇಣುಬಿಗಿದುಕೊಳ್ಳಲು ಉಪಯೋಗಿಸಿದ ಪ್ಲಾಸ್ಟಿಕ್ ಹಗ್ಗ ನೋಡುತ್ತಿದ್ದೇನೆ ಅದನ್ನು ಮುಮಾ 5 ಎಂದು ಗುರುತಿಸಲಾಯಿತು. ನನ್ನ ಗಂಡ ನೇಣುಬಿಗಿದುಕೊಂಡ ಸ್ಥಳದಲ್ಲಿ ಒಂದು ಏರ್ ಫಿಲ್ಟರ್ ಕಂಡುಬಂದಿರುತ್ತದೆ ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಮೂಮಾ 6 ಎಂದು ಗುರುತಿಸಲಾಯಿತು. ನಾನು ಸಹಿ ಮಾಡಿದ ದಾಖಲೆಗಳಲ್ಲಿ ಏನು ಬರೆಯಲಾಗಿದೆ ಗೊತ್ತಿಲ್ಲ. ನಾನು ವಿದ್ಯಾಭ್ಯಾಸ ಮಾಡಿಲ್ಲ. ನಾನು ಹೆಬ್ಬೆಟ್ಟು ಹಾಕುವ ಮೊದಲು ದಾಖಲೆಗಳಲ್ಲಿ ಏನು ಬರೆಯಲಾಗಿದೆ ಎಂದು ತಿಳಿದುಕೊಂಡು ಹೆಬ್ಬೆಟ್ಟು ಹಾಕಿಲ್ಲ.ನಿಪಿ 1 ದೂರು ಯಾರು ಬರೆದಿದ್ದಾರೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157 ರ ಪ್ರಕಾರ ಅನುಮತಿ ಕೊಡಲಾಯಿತು.)**

**ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

3) 1 ನೆ ಆರೋಪಿ ನನ್ನ ಗಂಡನನ್ನು ಕೆಲಸಕ್ಕೆ ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. 2 ನೆ ಆರೋಪಿ ನನ್ನ ಗಂಡ ಕೆಲಸ ಮಾಡುತ್ತಿದ್ದ ಹಂಗರಹಳ್ಳಿಯಲ್ಲಿ ಇರುವ ಎಸ ಎಲ್ ವಿ ಕ್ರಶರ್ ನ ಮಾಲೀಕರು ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ನಮಗೆ 70 ಸಾವಿರ ಮುಂಗಡ ಹಣ ಕೊಟು ಬೇರೆ ಕಡೆ ಹೋಗದಂತೆ ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ಗಂಡಾಳು ಕಲ್ಲು ಹೊಡೆಯುವ ಕೆಲಸ ಮಾಡುತ್ತಿದ್ದು ಹೆಣ್ಣಾಳು ಕಲ್ಲು ತುಂಬೋ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿದಾರರು ನಾನು ಮನೆಯಲ್ಲಿ ಇರುತ್ತಿದ್ದೆ ಎನ್ನುತ್ತಾರೆ. ನಮಗೆ ಒಂದು ಲೋಡಿಗೆ 150 ರೂ ಮಾತ್ರ ಕೊಡುತ್ತಿದ್ದರು ಎಂದರೆ ಸರಿಯಲ್ಲ. ದಿಃ 9.10.2016 ರಂದು ದಸರಾ ಪ್ರಯುಕ್ತ ಎಲ್ಲ ಕೂಲಿಯವರು ದಸರಗೆ ಹೋಗಿದ್ದರು ಎಂದರೆ ಸರಿಯಲ್ಲ. ಆಗ 1 ನೆ ಆರೋಪಿ ಎಲ್ಲರನ್ನು ಕರೆಸಿ ಅಲ್ಲಿದ್ದ ಕೆಲಸಗಾರರು ಮಾಡಿದ್ದ ಕೆಲಸಕ್ಕೆ ಅನುಗುಣವಾಗಿ ಹಣವನ್ನು ಲೆಕ್ಕ ಹಾಕಿ ಕೊಡುತ್ತಿದ್ದರು ಎಂದರೆ ಸರಿಯಲ್ಲ. ಆಗ ನನ್ನ ಗಂಡ ಮತ್ತು ಮೈದುನ ನಮ್ಮ ಲೆಕ್ಕ ಹಾಕಿ ಹಣಕೊಡಿ ಎಂದು ಕೇಳಿರುತ್ತಾರೆ ಎಂದರೆ ಸರಿಯಲ್ಲ. ಆಗ 1 ನೆ ಆರೋಪಿ ನನ್ನ ಗಂಡನಿಗೆ ನೀನು ಈಗ ಕುಡುದಿದೀಯ ಆಮೇಲೆ ಬಾ ಎಂದು ಹೇಳಿದನು ಎಂದರೆ ಸರಿಯಲ್ಲ. ಆಗ 1 ನೆಆರೋಪಿ ನಾವು ಪಡೆದಿರುವ ಅಡ್ವಾನ್ಸ್ ತೀರಿರುವುದಿಲ್ಲ ಇನ್ನು 50 ಸಾವಿರ ರೂ. ನಾವೆ ಕೊಡಬೇಕೆಂದು ನನ್ನ ಗಂಡನಿಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆಗ ನನ್ನ ಗಂಡ ನಾವು ಒಂದು ವರ್ಷಗಳಿಂದ ದುಡಿದಿದ್ದರು ಅಡ್ವಾನ್ಸ್ ತೀರಿಲ್ಲವ ಎಂದು 1 ನೆ ಆರೋಪಿಯನ್ನು ಪ್ರಶ್ನಿಸಿದರು ಎಂದರೆ ಸರಿಯಲ್ಲ. ಆಗ ಆರೋಪಿ 1 ಹಣ ಇನ್ನು ತೀರಿಲ್ಲ , ಹಣ ಕೊಡಿ ಇಲ್ಲದಿದ್ದರೆ ಅಲ್ಲಿವರೆಗು ಇಲ್ಲಿ ಕೆಲಸ ಮಾಡು ಇಲ್ಲವಾದರೆ ಎಲ್ಲಿಯಾದರು ಹೋಗಿ ಸಾಯಿ ಎಂದು ಬೋಳಿಮಗನೆ ಸೂಳೆಮಗನೆ ಬೈದರು ಎಂದರೆ ಸರಿಯಲ್ಲ. ಅಲ್ಲದೆ ಗಂಡನಿಗೆ ರಕ್ತಬರುವ ರೀತಿಯಲ್ಲಿ ಹಲ್ಲೆ ಮಾಡಿದರು ಎಂದರೆ ಸರಿಯಲ್ಲ. ನಂತರ ನಾನು ಮತ್ತು ನನ್ನ ಮೈದುನ ನನ್ನ ಗಂಡನನ್ನು ಮನೆಗೆ ಕರೆದುಕೊಂಡು ಬಂದೆವು ಎಂದರೆ ಸರಿಯಲ್ಲ. ನನ್ನ ಗಂಡ ನಂತರ ಕಲ್ಲನ್ನು ಹುಡೆಯಲು ಉಪಯೋಗಿಸುತ್ತಿದ್ದ ಗನ್ನನ್ನು ತೆಗೆದುಕೊಂಡು ಬರುತ್ತೇನೆ ಎಂದು ಹೋಗಿದ್ದರು ಎಂದರೆ ಸರಿಯಲ್ಲ. ನನ್ನ ಮೈದುನ ಹೂವಿನ ಹಾರ ತೆಗೆದುಕೊಂಡು ಬರುತ್ತೇನೆ ಎಂದು ಹೋಗಿದ್ದರು ಎಂದರೆ ಸರಿಯಲ್ಲ. ನಂತರ

ವಾಪಾಸು ಬಂದು ನನ್ನ ಗಂಡನನ್ನು ಹುಡುಕಿದಾಗ ಆತನು ಮನೆಯಲ್ಲಿ ಇರಲಿಲ್ಲ ಮತ್ತು ಎಲ್ಲಿಯು ಸಿಗಲಿಲ್ಲ ಎಂದರೆ ಸರಿಯಲ್ಲ. ನಂತರ ಚೌಡೇಶ್ವರಿ ಕ್ರಶರ್ ಗೆ ಸೇರಿದ ಒಂದು ಜಾಗದಲ್ಲಿ ನೇಣುಬಿಗಿದುಕೊಂಡ ಸ್ಥಿತಿಯಲ್ಲಿ ಅದೆ ದಿನ 4 ಗಂಟೆಗೆ ಕಂಡುಬಂದರು ಎಂದರೆ ಸರಿಯಲ್ಲ. ನನ್ನ ಗಂಡನ ಸಾವಿಗೆ ಆರೋಪಿತರು ಕಾರಣ ಎಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಆರೋಪಿತರು ಬೈದ ಕಾರಣ ನನ್ನ ಗಂಡ ಮನನೊಂದು ಅವರು ನೇಣುಬಿಗಿದುಕೊಂಡಿರುವುದು ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ.

4) ನಂತರ ಎಲ್ಲ ವಿಚಾರಗಳನ್ನು ನಾನು ಪೊಲೀಸರಿಗೆ ಆರೋಪಿತರೆ ನನ್ನ ಗಂಡನಿಗೆ ಕಾರಣ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ಸದರಿ ಹೇಳಿಕೆಯನ್ನು ಬರೆದುಕೊಂಡು ನನ್ನ ಹೆಬ್ಬೆಟ್ಟು ಪಡೆದುಕೊಂಡರು ಎಂದರೆ ಸರಿಯಲ್ಲ. ನಿಪಿ1 ರಲ್ಲಿ ಬರೆದಿರುವ ಎಲ್ಲ ಅಂಶಗಳನ್ನು ತಿಳಿದುಕೊಂಡು ಹೆಬ್ಬೆಟ್ಟು ಹಾಕಿದ್ದೆ ಎಂದರೆ ಸರಿಯಲ್ಲ. ಈ ಬಗ್ಗೆ 10.10.2018 ರಂದು ನಾನೆ ಪೊಲಿಸರನ್ನು ನನ್ನ ಗಂಡ ನೇಣುಹಾಕಿಕೊಂಡಜಾಗಕ್ಕೆ ಕರೆದುಕೊಂಡು ಜಾಗ ತೋರಿಸಿದ್ದೆ ಎಂದರೆ ಸರಿಯಲ್ಲ. ಚಾಸ 13 , 14 ರ ಸಮಕ್ಷಮ ಪೊಲೀಸರು ಜಾಗವನ್ನು ಪರಿಶೀಲಿಸಿ ನಿಪಿ 3 ರಂತೆ ಮಹಜರು ಬರೆದರು ಎಂದರೆ ಸರಿಯಲ್ಲ. ಅದನ್ನು 6-7.30 ನಡುವೆ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಎಂಒ 5 , 6 ನ್ನು ಸದರಿ ಸ್ಥಳದಿಂದ ಪೊಲೀಸರು ಸ್ವಾಧೀನಪಡಿಸಿಕೊಂಡರು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನಿಪಿ 2 ರಂತೆ ಭಾವಚಿತ್ರಗಳನ್ನು ತೆಗೆದರು ಎಂದರೆ ಸರಿಯಲ್ಲ. ಎಲ್ಲ ವಿಚಾರ ತಿಳಿದುಕೊಂಡುನಿಪಿ 3 ಕ್ಕೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ನಂತರ ಎಸ ಎಲ್ ವಿ ಕ್ರಶರ್ ನಮ್ಮ ಶೆಡ್ಡುಗಳ ಮುಂಭಾಗಕ್ಕೆ ನಾನು ಕರೆದುಕೊಂಡು ಹೋದೆ ಎಂದರೆ ಸರಿಯಲ್ಲ. ನನ್ನ ಗಂಡನನ್ನು ಸಾಯಿ ಎಂದು ಆರೋಪಿತರು ಪ್ರಚೋದಿಸಿದ ಜಾಗವನ್ನು ನಾನು ಪೊಲಿಸರಿಗೆ ತೋರಿಸಿದ್ದೆ ಎಂದರೆ ಸರಿಯಲ್ಲ. ಚಾಸ 13 , 14 ರವರ ಸಮಕ್ಷಮ 7.45-8.30 ರ ನಡುವೆ ನಿಪಿ 4 ರಂತೆ ಮಹಜರು ಬರೆಯಲಾಯಿತು ಎಂದರೆ ಸರಿಯಲ್ಲ. ಸದರಿ ಮಹಜರನ್ನ ಟಾರ್ಚ ಬೆಳಕಲ್ಲಿ ಮತ್ತು ಸ್ಥಳದಲ್ಲಿದ್ದ ಲೈಟು ಬೆಳಕಲ್ಲಿ ನನ್ನ ಸಮಕ್ಷಮ ಬರೆದಿದ್ದರು ಎಂದರೆ ಸರಿಯಲ್ಲ. ನಿಪಿ 4 ಕು ನಾನು ಅದರಲ್ಲಿ ಓದಿಸಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಎಲ್ಲ ವಿಚಾರಗಳನ್ನು

25.10.2018 ರಂದು ಪೊಲೀಸರಿಗೆ ಈಗ ಓದಿ ಹೇಳಿದಂತೆ ಓಬಳಾಪುರದ ಪುನೀತ ಎಂಬ ಮೇಸ್ತ್ರಿ----------------------ನಾನು ಹೇಳಿರವ ಮಾಹಿತಿ ಸರಿಯಾಗಿರುತ್ತದೆ ಎಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ 5 ಎಂದು ಗುರುತಿಸಲಾಯಿತು. ನಾನು ಆರೋಪಿತರ ಜೊತೆ ಪ್ರಕರಣ ರಾಜಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ತೀರಿಕೊಂಡ ಕಾರಣ ಆರೋಪಿತರ ಜೊತೆ ಶಾಮಿಲಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5)

6) ದಿಃ02.02.2018 ರಂದು ನಾನು ಪಾಂಡವಪುರ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿಃ26.01.2018 ರಂದು ಬೆಳಿಗ್ಗೆ 9.00 ಗಂಟೆಗೆ ನಾನು ನಮ್ಮ ಬೀದಿಯ ಕಾಳಮ್ಮ, ನಂಜಮ್ಮ ಬಾವಿ ಕಲ್ಲಿನ ಹತ್ತಿರ ಮಾತನಾಡುತ್ತಿದ್ದಾಗ ಆರೋಪಿತರು ಹುರುಳಿ ಮತ್ತು ರಾಗಿಯನ್ನು ಒಕ್ಕಲು ತನ ಮಾಡಲು ಚಾಸಾ- 1 ರವರ ಮನೆಯ ಮುಂದೆ ರಸ್ತೆಗೆ ತಂದು ಹಾಕಿದ್ದು ಆಗ ಚಾಸಾ- 1 ಮತ್ತು 2 ರವರು ಹುರುಳಿ ಮತ್ತು ರಾಗಿಯನ್ನು ಅವರ ಮನೆಯ ಮುಂದೆ ಹಾಕಬೇಡಿ ಅದರ ದೂಳು, ದುಂಬು ಹೊಟ್ಟು ನಮ್ಮ ಮನೆಗೆ ಬರುತ್ತದೆ, ನಾವು ಮನೆಕಟ್ಟಲು ಹಾಕಿರುವ ಜಲ್ಲಿಗೆ ರಾಗಿ ಮತ್ತು ಹುರುಳಿಯ ಒಟ್ಟು ಸೇರಿದರೆ ಬೇರ್ಪಡಿಸಲು ಆಗುವುದಿಲ್ಲ ತಾರ್ಸಿ ಮಾಡಿದಾಗ ಕಬ್ಬಿಣ ತುಕ್ಕು ಹಿಡಿಯುತ್ತದೆ ಮತ್ತು ರಸ್ತೆಯಲಿ ಓಡಾಡುವವರಿಗೆ ತೊಂದರೆಂಾಗುತ್ತದೆ ಎಂದು ಹೇಳಿದಾಗ ಆರೋಪಿತರು ರೊಚ್ಚಿಗೆದ್ದು ಏಕಾಏಕಿ ಚಾಸಾ- 1 ಮತ್ತು 2 ರವರನ್ನು ಉದ್ದೇಶಿಸಿ ಮಾದಿಗ ಹೊಲೆಯ ನನ್ನ ಮಕ್ಕಳಾ ನಮ್ಮನ್ನು ಕೇಳಲು ನೀವ್ಯಾರು ನಿಮ್ಮನು ಹೊಲದ ಹತ್ತಿರ ಕೊಲೆ ಮಾಡಿ ಬಿಸಾಡುತ್ತೇವೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಜಾತಿ ನಿಂದನೆ ಮಾಡಿದ್ದು ಆ ಸಮಯ ಉಳಿದ ಆರೋಪಿತರು ಸೇರಿ ಮಾದಿಗ ಮಕ್ಕಳಿಗೆ ಯಾಕೆ ಹೆದರಬೇಕು ಇವರ ಮನೆಯ ಮುಂದೆ ಹುರುಳು ಮತ್ತು ರಾಗಿ ಒಕ್ಕಲುತನ ಮಾಡಿ ಏನು ಮಾಡುತ್ತಾರೆ ನೋಡಿಕೊಳ್ಳೋಣ ಎಂದು 1 ಮತ್ತು 2 ನೇ ಆರೋಪಿತರಿಗೆ ಬೆಂಬಲ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯ 4 ನೇ ಆರೋಪಿ ಚಾಸಾ- 2 ರವರ ಸೀರೆಯನ್ನು ಎಳೆದು ಅವಮಾನ ಮಾಡಿ ಉಳಿದವರು ಚಾಸಾ- 1 ಮತ್ತು 2 ರವರ ಜುಟ್ಟು ಹಿಡಿದು ಎಳೆದಾಡಿ ಕೈಗಳಿಂದ ಎಳೆದಾಗಿ ಹೊಟ್ಟೆಗೆ ಕಪಾಲಕ್ಕೆ ತಲೆಗೆ ಬೆನ್ನಿಗೆಲ್ಲಾ ಹೋಡೆದು

ತುಳಿದು ನೋವು ಮಾಡಿದರು ಎಂದರೆ ಸರಿಯಲ್ಲ. ರಾಗಿ ಮತ್ತು ಹುರುಳಿ ಸಮೇತ ಅವರನ್ನು ಸೇರಿಸಿ ಬೆಂಕಿ ಹಾಕಿ ಸುಟ್ಟು ಹಾಕುತ್ತೇವೆ ಎಂದು ಹೊಲ ಗದ್ದೆ ಹತ್ತಿರ ಕುರಿ ದನ ಮೇಯಿಸಲು ಬಂದಾಗ ಯಾರಿಗೂ ಗೊತ್ತಾಗದ ಹಾಗೆ ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿದ್ದರು ಎಂದರೆ ಸರಿಯಲ್ಲ. ನಾನು, ಜ್ಯೋತಿ, ಕಮಲಮ್ಮ ಸೇರಿ ಜಗಳ ಬಿಡಿಸಿದೆವು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. **"ದಿಃ26.01.2018** ರಂದು ಬೆಳಿಗ್ಗೆ.............

... ..............… ..............… ..............… ..............… ..............…

ಬಿಡಿಸಿರುತ್ತೇವೆ" ಎಂಬ ಹೇಳಿಕೆಯನ್ನು ಪೊಲೀಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು **ನಿಪಿ.4** ಎಂದು ಗುರುತಿಸಲಾಯಿತು. ಆರೋಪಿತರ ಜೊತೆಗೆ ಅನ್ಯೋನ್ಯವಾಗಿ ಇದ್ದೇನೆ ಎಂದರೆ ಸರಿ. ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಎಲ್ಲಾ ವಿಚಾರ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಕೆ.ಆರ್.ಎಂ ವಕೀಲರಿಂದಃ**

7) ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**

5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ

ನ್ಯಾಯಾಲಯ, ಮಂಡ್ಯ